# ಷೆಡ್ಯೂಲ್ –I

## ಕೆಂಪೇಗೌಡ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ಶ್ರೀಗಂಧದಕಾವಲು, ಬೆಂಗಳೂರು.

1. **ಬೋಧಕ ಸಿಬ್ಬಂದಿ:**

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಮಂಜೂರಾದ ವೃಂದಬಲ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|---|---|
| (1) | (2) | (3) | (4) | (5) |
| 1 | ಪ್ರಾಂಶುಪಾಲರು | 1 | ಅಸೋಸಿಯೇಟ್ ಪ್ರೊಫೆಸರ್/ ಅಸಿಸ್ಟೆಂಟ್ ಪ್ರೊಫೆಸರ್ ವೃಂದದಿಂದ ಜೇಷ್ಠತೆ ಮತ್ತು ಮೆರಿಟ್ ಆಧಾರದ ಮೇಲೆ ಬಡ್ತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ (ಗ್ರೇಡಿಂಗ್ ಪದ್ಧತಿ ಆಧಾರದ ಮೇಲೆ ಶೇಕಡಾ 55 ಅಂಕಗಳಿಗೆ ಸಮನಾದ ಶ್ರೇಣಿ) ಹೊಂದಿರಬೇಕು.<br>2) ಸಂಶೋಧನೆಗಳಿಗೆ ಮಾರ್ಗದರ್ಶನ ನೀಡಿದ ಮತ್ತು ಪ್ರಕಟಣೆಗಳನ್ನು ಹೊರತಂದಿರುವ ಬಗ್ಗೆ ಪ್ರಮಾಣಪತ್ರಗಳೊಂದಿಗೆ ಸಂಬಂಧಿಸಿದ ವಿಷಯದಲ್ಲಿ ಪಿ.ಹೆಚ್.ಡಿ. ಹೊಂದಿರಬೇಕು.<br>3) ಸಂಸ್ಥೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್/ಅಸಿಸ್ಟೆಂಟ್ ಪ್ರೊಫೆಸರ್ ವೃಂದದಲ್ಲಿ ಬೋಧನೆ/ಸಂಶೋಧನೆಯಲ್ಲಿ ಒಟ್ಟು 15 ವರ್ಷಗಳ ಅನುಭವ.<br>4) ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಣೆ ಆಧಾರದ ಮೇಲಿನ ಮೌಲ್ಯಮಾಪನದಲ್ಲಿ (PBAS) ಶೈಕ್ಷಣಿಕ ಕಾರ್ಯಕ್ಷಮತೆಯಲ್ಲಿ ಕನಿಷ್ಠ ಅಂಕ (API Score) ಪಡೆದಿರಬೇಕು.<br>5) ಒಂದು ವರ್ಷದ ಅವಧಿಯೊಳಗೆ ಬಡ್ತಿಗೆ ಅರ್ಹ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ಯು.ಜಿ.ಸಿ. ಮಾರ್ಗಸೂಚಿಗಳನ್ವಯ ನೇರ ನೇಮಕಾತಿ. |
| 2 | ಅಸಿಸ್ಟೆಂಟ್ ಪ್ರೊಫೆಸರ್<br>(ಇತಿಹಾಸ –1)<br>(ಅರ್ಥಶಾಸ್ತ್ರ –1)<br>(ರಾಜ್ಯಶಾಸ್ತ್ರ –1)<br>(ಸಮಾಜಶಾಸ್ತ್ರ –2)<br>(ಪತ್ರಿಕೋದ್ಯಮ – 1)<br>(ಕನ್ನಡ – 1)<br>(ಇಂಗ್ಲಿಷ್ –1)<br>(ವಾಣಿಜ್ಯಶಾಸ್ತ್ರ ವಿಷಯಗಳು –5) | 13 | ನೇರ ನೇಮಕಾತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇಕಡಾ 55 ಅಂಕಗಳೊಂದಿಗೆ (ಅಥವಾ ತತ್ಸಮಾನ ಗ್ರೇಡಿನಲ್ಲಿ) ಸಂಬಂಧಿಸಿದ ವಿಷಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು.<br>2) ಅಭ್ಯರ್ಥಿಯು ಯು.ಜಿ.ಸಿ./ಐ.ಸಿ.ಎ.ಆರ್./ಸಿ.ಎಸ್.ಐ.ಆರ್. ನಿಗದಿಪಡಿಸಿದ ನೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಯು.ಜಿ.ಸಿ. ಅಂಗೀಕೃತ ಅಥವಾ ತತ್ಸಮಾನ ಪರೀಕ್ಷೆಗಳಾದ ಎಸ್.ಎಲ್.ಇ.ಟಿ./ಎಸ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>3) *ಆದರೆ ಯು.ಜಿ.ಸಿ. ನಿಯಮಾವಳಿ 2009 ಅಥವಾ 2016 ರಂತೆ ಪಿ.ಹೆಚ್.ಡಿ. ಪಡೆದವರಿಗೆ ಎನ್.ಇ.ಟಿ./ ಎಸ್.ಎಲ್.ಇ.ಟಿ./ಎಸ್.ಇ.ಟಿ. ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು.* |

| (1) | (2) | (3) | (4) | (5) |
|---|---|---|---|---|
| 3 | ಸಹಾಯಕ ಗ್ರಂಥಪಾಲಕ (ಅಸಿಸ್ಟೆಂಟ್ ಲೈಬ್ರರಿಯನ್) | 1 | ನೇರ ನೇಮಕಾತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ..ಲಿಬ್. ಪದವಿಯಲ್ಲಿ ಶೇಕಡಾ 55 ಅಂಕ ಪಡೆದಿರಬೇಕು. |
| 4 | ದೈಹಿಕ ಶಿಕ್ಷಣ ನಿರ್ದೇಶಕರು (ಅಸಿಸ್ಟೆಂಟ್ ಪ್ರೊಫೆಸರ್ ವೃಂದಕ್ಕೆ ಸಮಾನ) | 1 | ನೇರ ನೇಮಕಾತಿ | 1) ಅಂಗೀಕೃತ ವಿಶ್ವವಿದ್ಯಾಲಯದಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡೆಯಲ್ಲಿ ಕನಿಷ್ಠ ಶೇಕಡಾ 55 ಅಂಕದೊಂದಿಗೆ ಸ್ನಾತಕೋತ್ತರ ಪದವಿ (ಎಂ.ಪಿ.ಇ.ಡಿ.) ಹೊಂದಿರಬೇಕು ಅಥವಾ ಕ್ರೀಡಾ ವಿಜ್ಞಾನ ವಿಷಯದಲ್ಲಿ ಶೇಕಡಾ 55 ಅಂಕದೊಂದಿಗೆ ಸ್ನಾತಕೋತ್ತರ ಪದವಿ (ಅಥವಾ ತತ್ಸಮಾನ ಗ್ರೇಡ್) ಹೊಂದಿರಬೇಕು.<br>2) ಅಭ್ಯರ್ಥಿಯು ಯು.ಜಿ.ಸಿ./ಐ.ಸಿ.ಎ.ಆರ್./ಸಿ.ಎಸ್.ಐ.ಆರ್. ನಿಗದಿಪಡಿಸಿದ ನೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಯು.ಜಿ.ಸಿ. ಅಂಗೀಕೃತ ಅಥವಾ ತತ್ಸಮಾನ ಪರೀಕ್ಷೆಗಳಾದ ಎಸ್.ಎಲ್.ಇ.ಟಿ./ಎಸ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |

II. **<u>ಬೋಧಕೇತರ ಸಿಬ್ಬಂದಿ:</u>**

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಮಂಜೂರಾದ ವೃಂದಬಲ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|---|---|
| (1) | (2) | (3) | (4) | (5) |
| 1 | ಕಛೇರಿ ಅಧೀಕ್ಷಕ | 1 | ಪ್ರಥಮ ದರ್ಜೆ ಸಹಾಯಕ ವೃಂದದಿಂದ ಬಡ್ತಿ | 1) ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ 5 ವರ್ಷಗಳಿಗೆ ಕಡಿಮೆ ಇಲ್ಲದ ಸೇವೆ ಸಲ್ಲಿಸಿರಬೇಕು.<br>2) ಬೇಸಿಕ್ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. |
| 2 | ಪ್ರಥಮ ದರ್ಜೆ ಸಹಾಯಕ (ಲೆಕ್ಕಪತ್ರ & ಹಣಕಾಸು, ಸ್ಕಾಲರ್‌ಷಿಪ್) | 1 | 40% ನೇರ ನೇಮಕಾತಿ ಮತ್ತು<br>60% ದ್ವಿತೀಯ ದರ್ಜೆ ಸಹಾಯಕ ವೃಂದದಿಂದ ಬಡ್ತಿ | **<u>ನೇರ ನೇಮಕಾತಿಗೆ:</u>**<br>1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು.<br>2) ಅಂಗೀಕೃತ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಕೋರ್ಸ್ ಸರ್ಟಿಫಿಕೇಟ್ ಪಡೆದಿರಬೇಕು.<br>**<u>ಬಡ್ತಿಗೆ:</u>**<br>ದ್ವಿತೀಯ ದರ್ಜೆ ಸಹಾಯಕ ವೃಂದದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರಬೇಕು. |

| (1) | (2) | (3) | (4) | (5) |
|---|---|---|---|---|
| 3 | ದ್ವಿತೀಯ ದರ್ಜೆ ಸಹಾಯಕ (ಸಿಬ್ಬಂದಿ, ಟಪ್ಪಾಲು –1) (ಪ್ರವೇಶಾತಿ,ಪರೀಕ್ಷೆ & ವಿಶ್ವವಿದ್ಯಾಲಯ –1) | 2 | ನೇರ ನೇಮಕಾತಿ | 1) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>2) ಅಂಗೀಕೃತ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಕೋರ್ಸ್ ಸರ್ಟಿಫಿಕೇಟ್ ಪಡೆದಿರಬೇಕು. |
| 4 | ಬೆರಳಚ್ಚುಗಾರ (ಕಂಪ್ಯೂಟರ್ ಆಪರೇಟರ್) | 1 | --- | ಬೆರಳಚ್ಚುಗಾರ/ಕಂಪ್ಯೂಟರ್ ಆಪರೇಟರ್‌ಗಳು ಈಗಿರುವ ಹುದ್ದೆಗಳಲ್ಲಿ ಅವರ ಪದಾವಧಿಯವರೆಗೆ ಮುಂದುವರೆಯತಕ್ಕದ್ದು. ತದನಂತರ ಈ ಹುದ್ದೆಗಳು ರದ್ದುಗೊಳ್ಳುವುವು. |
| 5 | ಅಟೆಂಡರ್<br>(ಕಾಲೇಜು ಕಛೇರಿ –1)<br>(ಗ್ರಂಥಾಲಯ –1)<br>(ಕಂಪ್ಯೂಟರ್ ಲ್ಯಾಬ್ –1) | 3 | ನೇರ ನೇಮಕಾತಿ | ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 6 | ಎಲೆಕ್ಟ್ರಿಷಿಯನ್ (ಶ್ರೀಗಂಧದಕಾವಲುನಲ್ಲಿರುವ ರಾ.ಒ.ಸ. ಕಟ್ಟಡಗಳಲ್ಲಿನ ಕಾರ್ಯನಿರ್ವಹಣೆಗಾಗಿ) | 1 | ಹೊರಗುತ್ತಿಗೆ | ಮಾನ್ಯತೆ ಪಡೆದ ಸಂಸ್ಥೆಯಿಂದ ಸಂಬಂಧಿಸಿದ ಟ್ರೇಡ್‌ನಲ್ಲಿ ಐ.ಟಿ.ಐ. ಕೋರ್ಸನಲ್ಲಿ ಉತ್ತೀರ್ಣರಾಗಿರಬೇಕು. |
| 7 | ಪ್ಲಂಬರ್ (ಶ್ರೀಗಂಧದಕಾವಲುನಲ್ಲಿರುವ ರಾ.ಒ.ಸ. ಕಟ್ಟಡಗಳಲ್ಲಿನ ಕಾರ್ಯನಿರ್ವಹಣೆಗಾಗಿ) | 1 | ಹೊರಗುತ್ತಿಗೆ | ಮಾನ್ಯತೆ ಪಡೆದ ಸಂಸ್ಥೆಯಿಂದ ಸಂಬಂಧಿಸಿದ ಟ್ರೇಡ್‌ನಲ್ಲಿ ಐ.ಟಿ.ಐ. ಕೋರ್ಸನಲ್ಲಿ ಉತ್ತೀರ್ಣರಾಗಿರಬೇಕು. |

ಟಿಪ್ಪಣಿ: ಕ್ರಮ ಸಂಖ್ಯೆ: 1 ರಿಂದ 5 ರವರೆಗಿನ ಹುದ್ದೆಗಳನ್ನು ಷೆಡ್ಯೂಲ್ –2ರಲ್ಲಿ ನಮೂದಿಸಿರುವ ಒಂದುಗೂಡಿಸಿದ ಹುದ್ದೆಗಳಿಂದ ಭರ್ತಿಮಾಡತಕ್ಕದ್ದು.

**(ಬಿ.ಸಿದ್ದಯ್ಯ)**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
**ರಾಜ್ಯ ಒಕ್ಕಲಿಗರ ಸಂಘ.**